**ನಾಗರಿಕ ಸೇವಾ ಟ್ರಸ್ಟ್**
**ಸಸ್ಯೋದ್ಯಾನ, ಶಕ್ತಿನಗರ**
**ಅಂಚೆ: ಗುರುವಾಯನಕೆರೆ – 574217 (ದ.ಕ.ಜಿಲ್ಲೆ)**
**ಮೊಬೈಲ್: 9448287050, 7795042149**
**Email: nagarikaseva@gmail.com**

**ಸತ್ಯಮೇವ ಜಯತೇ ಸಂಘಟನೆಗಳ ಒಕ್ಕೂಟ–ಕರ್ನಾಟಕ**
**ಕಚೇರಿ: ನಾಗರಿಕ ಸೇವಾ ಟ್ರಸ್ಟ್ ಕಚೇರಿ,**
**ಶಕ್ತಿನಗರ, ಅಂಚೆ: ಗುರುವಾಯನಕೆರೆ-574217 (ದ.ಕ.)**
**ಮೊ: 9448287050, Email: nagarikaseva@gmail.com**

ದಿನಾಂಕ: 24.3.2025

ಸಂಪಾದಕರು
ಉದಯವಾಣಿ ದೈನಿಕ ಮಣಿಪಾಲ ಮತ್ತು
ವರದಿಗಾರರು ಉದಯವಾಣಿ ಬೆಳ್ತಂಗಡಿ

ಮಾನ್ಯರೇ,

ನಮ್ಮೆರಡು ಜಿಲ್ಲೆಯ ಪ್ರಮುಖ ದೈನಿಕ ಉದಯವಾಣಿ ಇದರ ಓದುಗರಿಗೆ ಎಲ್ಲಾ ಸುದ್ದಿಗಳನ್ನು ನೀಡಬೇಕಾದ್ದು ಪತ್ರಿಕಾ ಧರ್ಮ. ಅದೇನೋ ನಿಮ್ಮ ಉಪಕಾರ ಅಲ್ಲ. ಹೆಗ್ಗಡೆಯವರ ಸುದ್ದಿಗಳನ್ನು ಕಾಲಂ ಗಟ್ಟಲೆ ಫೋಟೋಸಹಿತ ರಾಜ್ಯಮಟ್ಟದ ವರದಿಯಾಗಿ ಪ್ರಕಟಿಸುವ ನೀವು ನಾಗರಿಕ ಸೇವಾ ಟ್ರಸ್ಟ್‌ನ ವರದಿಗಳನ್ನು, ನಾವು ಹೆಗ್ಗಡೆಯವರ ಅಕ್ರಮಗಳನ್ನು ದಾಖಲೆ ಸಹಿತ ಬಯಲಿಗೆಳೆಯುತ್ತಿರುವ ಕಾರಣಕ್ಕಾಗಿಯೂ ಹೆಗ್ಗಡೆಯವರು ನಿಮಗೆ ಕೋಟಿಗಟ್ಟಲೆ ರೂಪಾಯಿಯ ಜಾಹೀರಾತು ನೀಡುವ ಕಾರಣಕ್ಕಾಗಿಯೂ ಪ್ರಕಟಿಸದಿರುವುದು, ಪದೇಪದೇ ನೆನಪಿಸಿದಾಗ ಯಾವಾಗಲೋ ಒಂದು ಚಿಕ್ಕ ವರದಿಯನ್ನು ಬೆಳ್ತಂಗಡಿ–ಬಂಟ್ವಾಳಕ್ಕೆ ಸೀಮಿತವಾದ ಸುದಿನದಲ್ಲಿ ಪ್ರಕಟಿಸುವುದು ನಡೆಯುತ್ತಾ ಇದೆ. ನಮ್ಮನ್ನು ನೀವು ಹಗುರವಾಗಿ ಪರಿಗಣಿಸುತ್ತಿದ್ದೀರಿ. ನಿಮ್ಮ ಪತ್ರಿಕೆಯಲ್ಲಿ ವರದಿ ಬಂದರೆ ನಮಗೆ ಕಿರೀಟ ಬರುವುದಿಲ್ಲ. ಆದರೆ ಓದುಗರಿಗೆ ನೀವು ದ್ರೋಹ ಮಾಡಿದಂತೆ. ನಿಮ್ಮ ಪತ್ರಿಕೆಗೆ ಬ್ರೇಕೆಟ್‌ನಲ್ಲಿ ಹೆಗ್ಗಡೆವಾಣಿ ಎಂದು ಹಾಕಿದರೆ ಸೂಕ್ತವಲ್ಲವೇ?

ಉಜಿರೆಯಿಂದ ಧರ್ಮಸ್ಥಳಕ್ಕೆ 4 ಸಾವಿರ ಮಂದಿಯ ಪಾದಯಾತ್ರೆ ನಿಮ್ಮ ಪತ್ರಿಕೆಯಲ್ಲಿ 25 ಸಾವಿರ ಆಗ್ತದೆ! ಧರ್ಮಸ್ಥಳದ ದಲಿತರ ಮುರುಕು ಮನೆಗಳ ದುಃಸ್ಥಿತಿ ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ಹೆಗ್ಗಡೆಯವರ ಬೀಡು ಚಿತ್ರೀಕರಿಸುವ ನಿಮಗೆ ಸೌಜನ್ಯಾಳ ಕುಟುಂಬದ ಗೋಳು ಕೇಳುವುದಿಲ್ಲ. ಧರ್ಮಸ್ಥಳದಲ್ಲಾದ ನೂರಾರು ಎಕ್ರೆ ಅತಿಕ್ರಮಣ ಕಾಣುವುದಿಲ್ಲ. ನಾವು ಆಧಾರ ಸಹಿತ ನಿಮಗೆ ಕಳಿಸಿದ ಇದರ ವರದಿ ಕಸದ ಬುಟ್ಟಿಗೆ ಹಾಕ್ತಿರೀ! ನೀವು ಪಶ್ಚಾತ್ತಾಪ ಪಡಬೇಕಾದ ಕಾಲ ದೂರವಿಲ್ಲ–ನೆನಪಿರಲಿ.

ಇನ್ನು ಮುಂದೆ ನಾವು ನಮ್ಮ ವರದಿ, ಪತ್ರಿಕಾ ಹೇಳಿಕೆ ನಿಮಗೆ ಕಳಿಸುವುದಿಲ್ಲ. ನಿಮಗೆ ದುಂಬಾಲು ಬಿದ್ದು ವರದಿ ಹಾಕಿಸುವ ದರ್ದು ನಮಗಿಲ್ಲ.

**(ಕೆ. ಸೋಮನಾಥ ನಾಯಕ್)**
**ಅಧ್ಯಕ್ಷರು**
**ನಾಗರಿಕ ಸೇವಾ ಟ್ರಸ್ಟ್**

**( ಎಂ. ಬಿ. ಕರಿಯ) (ಸೋಮಶೇಖರ ದೇವಸ್ಯ)**
**ಸಂಚಾಲಕರು**
**ಸತ್ಯಮೇವ ಜಯತೇ ಸಂಘಟನೆಗಳ ಒಕ್ಕೂಟ–ಕರ್ನಾಟಕ**

**ಯಥಾಪ್ರತಿ:** ಎಲ್ಲಾ ಮಾಧ್ಯಮಗಳು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ದ.ಕ. ಮತ್ತು ಉಡುಪಿ ಜಿಲ್ಲಾಧಿಕಾರಿಗಳು
ದ.ಕ. ಮತ್ತು ಉಡುಪಿ ಸಂಸದರು ಮತ್ತು ಶಾಸಕರು

**ಸತ್ಯಮೇವ ಜಯತೇ ಸಂಘಟನೆಗಳ ಒಕ್ಕೂಟದ ಸಂಚಾಲಕರು:** ಲಕ್ಷ್ಮೀಶ ತೋಳ್ಪಾಡಿ, ಡಾ। ನರೇಂದ್ರ ನಾಯಕ್, ಕೆ. ವಿಶ್ವನಾಥ ಶೆಟ್ಟಿ, ರಾಘವೇಂದ್ರಾಚಾರ್, ಶಿವರಾಜೇ ಗೌಡ, ಎಸ್. ಕುಮಾರ್, ಕೆ. ಸೋಮನಾಥ ನಾಯಕ್, ಎಂ.ಬಿ.ಕರಿಯ, ಸೋಮಶೇಖರ ದೇವಸ್ಯ.

**ನಾಗರಿಕ ಸೇವಾ ಟ್ರಸ್ಟ್‌ನ ಕಾರ್ಯಕಾರಿ:** ಕೆ.ಸೋಮನಾಥ ನಾಯಕ್, ಜಯಪ್ರಕಾಶ್ ಭಟ್, ರಂಜನ್ ರಾವ್ ಯರ್ಡೂರ್, ವಿದ್ಯಾ ನಾಯಕ್, ನಾರಾಯಣ ಕಿಲಂಗೋಡಿ, ದಯಾನಂದ ಪೂಜಾರಿ, ವನಿತಾ ಜೈನ್, ಕೆ. ಸದಾಶಿವ ಹೆಗ್ಡೆ, ಬಾಬು ಎ.